7

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆ ಇಲಾಖೆ.

ಸಂಖ್ಯೆ/ವಾಶಾ/ಸಿಆರ್-34/14-15/ಬಿ- 2087

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಚೇರಿ (ಜಾರಿ), ಉತ್ತರ ವಲಯ, ಬೆಳಗಾವಿ ವಿಭಾಗ

ಬೆಳಗಾವಿ, ದಿನಾಂಕ: 21-10-2014.

: ಪ್ರಕಟಣೆ :

ವಿಷಯ: ಈ ಕಚೇರಿಯ ಸರಕಾರಿ ಅಧಿಕೃತ ಕೆಲಸಕ್ಕೆ 09 ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಸಾಮಾನ್ಯ ಟೆಂಡರ ಪ್ರಕ್ರಿಯೆ ಮುಖೇನ ಪಡೆಯುವ ಬಗ್ಗೆ.

ಉಲ್ಲೇಖ:
1) ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು, ಬೆಂಗಳೂರು ಇವರ ಕಚೇರಿಯ ಪತ್ರ ಸಂ.: ವಿಹೆಚ್‌ಟಿ/ಸಿಆರ್-02/2011-12 ದಿನಾಂಕ: 03-09-2011.
2) ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 96: ಶಿವಾನೀ 2012, ಬೆಂಗಳೂರು ದಿನಾಂಕ 23.08.2012.
3) ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು, ಬೆಂಗಳೂರು ಇವರ ಕಚೇರಿಯ ಪತ್ರ ಸಂ.: ವಿಹೆಚ್‌ಟಿ/ಸಿಆರ್-20/2013-14 ದಿನಾಂಕ: 30-09-2014.

*********

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ, ಬೆಳಗಾವಿ ಇವರ ಕಛೇರಿಗೆ 07, ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಜಾರಿ), ಬಿಜಾಪೂರ ಹಾಗೂ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಜಾರಿ), ಬಾಗಲಕೋಟ ಕಛೇರಿಗೆ ತಲಾ 01 ವಾಹನಗಳು ಒಟ್ಟು ಈ ವಿಭಾಗಕ್ಕೆ 09 ಖಾಸಗಿ ವಾಹನಗಳನ್ನು ಪಡೆಯಲು ಈ ಕೆಳಗೆ ನಮೂದಿಸಿರುವ ಷರತ್ತಿಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದೆ.

ಷರತ್ತುಗಳು :-

1) ವಾಹನವು 2010 ಮತ್ತು ಆ ನಂತರದ ವರ್ಷಗಳ ಮಾದರಿಯ ಚಾರ್ವಲೇಟ್ ಜಾಯ್, ಟಾಟಾ ಸುಮೋ, ಸ್ಕಾರ್ಪಿಯೋ, ಇನೋವಾ, ಮಹೇಂದ್ರಾ ಎಕ್ಸ್‌ಯುವಿ, ಮತ್ತು ಬುಲ್ಲೆರೊ ಇತ್ಯಾದಿ ವಾಹನಗಳನ್ನು ಮಾತ್ರ ಪಡೆಯಲಾಗುವುದು. (2013 ಮತ್ತು 2014 ಮಾದರಿಯ ವಾಹನಗಳಿಗೆ ಆದ್ಯತೆ ನೀಡಲಾಗುವುದು)
2) ಸರಕಾರಿ ಆದೇಶದಂತೆ ಪ್ರತಿ ವಾಹನಕ್ಕೆ 2,500 ಕೀ.ಮೀಗೆ. ಗರಿಷ್ಟ ಮಾಸಿಕ ದರ ರೂ. 25,000/-ರಂತೆ, ತದನಂತರ ಓಡಿದಲ್ಲಿ ಪ್ರತಿ ಕೀ.ಮೀ. ದರ ರೂ. 5.50/-ರಂತೆ ಇರುತ್ತದೆ.
3) ವಾಹನ ಮತ್ತು ಚಾಲಕರಿಗೆ ಸಂಬಂಧಿಸಿದ ದಾಖಲೆಗಳ ಝುರಾಕ್ಸ ಪ್ರತಿಗಳನ್ನು (ಮಾಲೀಕರ ಭಾವಚಿತ್ರ, ವಾಸ ಧೃಢೀಕರಣ ಪತ್ರ, ಖಾಯಂ ವಿಳಾಸದ ದಾಖಲೆ, ವಾಹನದ ನೊಂದಣಿ ಪ್ರಮಾಣ ಪತ್ರ, ಚಾಲನಾ ಪರವಾನಗಿ, ವಿಮಾ ಪಾಲಿಸಿ, ತೆರಿಗೆ ಪಾವತಿ ಪ್ರಮಾಣ ಪತ್ರ, ವೃತ್ತಿ ತೆರಿಗೆ ಪ್ರಮಾಣ ಪತ್ರ) ಸಲ್ಲಿಸುವುದು.

4) ಮಾಲೀಕರೆ ವಾಹನದ ಚಾಲಕರು / ಟ್ರಾವೆಲ ಏಜೆನ್ಸಿದಾರರು / ಸಂಸ್ಥೆಯಾದಲ್ಲಿ / ವೈಯಕ್ತಿಕ ವಾಹನ ಮಾಲಕರು ತಮ್ಮ ತಮ್ಮ ಖಾಯಂ ವಿಳಾಸ, ದೂರವಾಣಿ ಸಂಖ್ಯೆ ಮತ್ತು ವಾಹನ ಸೇವೆಯ ಅನುಭವದ ಬಗ್ಗೆ ದಾಖಲೆಗಳು, ಇ. ಎಸ್. ಐ ಮತ್ತು ಪಿ. ಎಫ್‌ಗಳ ದಾಖಲೆಗಳನ್ನು ಸಲ್ಲಿಸುವುದು.

5) ಟೋಲ್ ನಾಕಾದಲ್ಲಿಯ ರಸ್ತೆ ಕರ ವಾಹನದ ಮಾಲೀಕರೆ ತುಂಬಬೇಕು.

6) ವಾಹನವು ಕಚೇರಿಯ ಸಮಯದ ಅಥವಾ ಕರ್ತವ್ಯದ ನಂತರ ಕಡ್ಡಾಯವಾಗಿ ಕಚೇರಿಯ ಆವರಣದಲ್ಲಿ ನಿಲ್ಲಿಸಿ, ಸಂಬಂಧಿಸಿದ ಅಧಿಕಾರಿಯವರಿಗೆ ತಿಳಿಸಿ ಹೋಗಬೇಕು.

7) ವಾಹನವು ಸುಸ್ಥಿತಿಯಲ್ಲಿರಬೇಕು. ಮತ್ತು ದುರಸ್ಥಿ (ರಿಪೇರಿ & ಮೆಂಟೇನೆನ್ಸ್) ಮತ್ತು ಡಿಸೇಲ ಅಥವಾ ಪೆಟ್ರೋಲ ವಾಹನದ ಮಾಲೀಕರಿಗೆ ಸಂಬಂಧಿಸಿದ್ದು.

8) ಅನುದಾನದ ಲಭ್ಯತೆಯ ಮೇರೆಗೆ ಬಿಲ್ಲನ್ನು ಸಂದಾಯ ಮಾಡಲಾಗುವುದು.

9) ಸಂಬಂಧಿಸಿದ ತೆರಿಗೆಗಳನ್ನು ಕಡಿತಗೊಳಿಸಿ ಬಿಲ್ಲನ್ನು ಸಂದಾಯ ಮಾಡಲಾಗುವುದು.

10) ವಾಹನವು ದುರಸ್ಥಿಗೆ ಬಂದಲ್ಲಿ ಅಥವಾ ಚಾಲಕನು ಹಾಜರಾಗದಿದ್ದ ಸಂರ್ಧಬದಲ್ಲಿ ಬದಲಿ ಚಾಲಕ / ವಾಹನದ ವ್ಯವಸ್ಥೆ ತಕ್ಷಣ ಮಾಡತಕ್ಕದ್ದು.

11) ವಾಹನದ ಅಥವಾ ಮಾಲೀಕರ ಮೇಲೆ ದೂರುಗಳು ಬಂದಲ್ಲಿ ವಿಚಾರಣೆ ನಡೆಸಿ ಯೋಗ್ಯ ಕ್ರಮ ಕೈಕೊಳ್ಳಲಾಗುವುದು.

12) ಮಾಲೀಕರೆ ಚಾಲಕರಾಗಿರುವ ವಾಹನಗಳು ಅಥವಾ ಏಜೇನ್ಸಿ /ಸಂಸ್ಥೆಯಿಂದ ವಾಹನಗಳನ್ನು ಪಡೆದಿದ್ದಲ್ಲಿ ಚಾಲನಾ ಕೌಶಲ್ಯವನ್ನು ಪರೀಶಿಲಿಸಿದ ನಂತರ ವಾಹನಗಳನ್ನು ಪಡೆದುಕೋಳ್ಳಲಾಗುವುದು.

13) ರಾತ್ರಿ ಪಾಳೆಯ ಜಾಗೃತಿ ಕರ್ತವ್ಯಕ್ಕೆ ಅಧಿಕಾರಿಗಳೊಂದಿಗೆ ವಾಹನವನ್ನು ನಿಯೋಜನೆ ಮಾಡಲಾಗುವುದು.

14) **ಅಂತಿಮ ನಿರ್ಧಾರವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ, ಬೆಳಗಾವಿ ವಿಭಾಗ ಬೆಳಗಾವಿ ಇವರು ತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತಾರೆ.**

ಮೇಲೆ ತಿಳಿಸಿದ ಎಲ್ಲ ಷರತ್ತುಗಳನ್ನು ಒಪ್ಪಿಕೊಂಡು ಈ ಕಚೇರಿಯ ಕಾರ್ಯಾಲಯದಲ್ಲಿ ದಿನಾಂಕ: 31-10-2014ರ ಸಾಯಂಕಾಲ 5.00 ಘಂಟೆಯೊಳಗೆ ಅರ್ಜಿಯನ್ನು ವಾಹನದ ನೋಂದಣಿ ಪತ್ರ ಚಾಲನಾ ಲೈಸನ್ಸ್, ಇನ್ಸೂರನ್ಸ್, ಎಮ್ಮಿಷನ ಟೆಸ್ಟ ರಿಪೋರ್ಟನ ಝರಾಕ್ಸ ಪ್ರತಿಗಳೊಂದಿಗೆ ಸಲ್ಲಿಸತಕ್ಕದ್ದು.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು,
(ಜಾರಿ), ಉತ್ತರ ವಲಯ, ಬೆಳಗಾವಿ
ವಿಭಾಗ ಬೆಳಗಾವಿ.

ಪ್ರತಿಯನ್ನು :-

1) ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

2) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌಲ್ಯ ವರ್ಧಿತ ತೆರಿಗೆ ವಿಭಾಗ, ಬೆಳಗಾವಿ ಇವರಿಗೆ ಶುಭಾಷಯಗಳೊಂದಿಗೆ, ಅಧಿಸೂಚನೆಯನ್ನು ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ವಿನಂತಿಯೊಂದಿಗೆ.

3) ಮಾನ್ಯ ಪಾದೇಶಿಕ ಸಾರಿಗೆ ಅಧಿಕಾರಿಗಳು, ಬೆಳಗಾವಿ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಲು ವಿನಂತಿಯೊಂದಿಗೆ.

4) ಕಛೇರಿಯ ಪ್ರತಿ.

5) ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇ-ಆಡಳಿತ ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ, ಬೆಂಗಳೂರುರವರಿಗೆ ಇಲಾಖೆಯ ಅಂತರ್ಜಾಲ ತಾಣ ctx.kar.nic. & E-Notice Board ಎರಡರಲ್ಲಿ ಪ್ರಕಟಿಸಲು ಕೋರಿದೆ.